ಬಂದ ನಂತರವೇ ಗುತ್ತಿಗೆದಾರರಿಗೆ ಅಂತಿಮ ಬಿಲ್ಲನ್ನು ಪಾವತಿ ಮಾಡಲಾಗುವುದು. ಗುತ್ತಿಗೆಯ ಕರಾರಿನಂತೆ ಅಂತಿಮ ಬಿಲ್ಲನ್ನು ಪಾವತಿಪಾಡಿದ ನಂತರದ ಒಂದು ವರ್ಷದವರೆಗೆ ಈ ಕಟ್ಟಡದ ನಿರ್ವಹಣೆಯನ್ನು ಗುತ್ತಿಗೆದಾರರೇ ಸ್ವಂತ ಖರ್ಚಿನಲ್ಲಿ ಮಾಡಬೇಕಿದ್ದು ಆಗಲೂ ಲೋಪದೋಷಗಳು ಕಂಡುಬಂದಲ್ಲಿ ಗುತ್ತಿಗೆದಾರರೇ ಸರಿಪಡಿಸಬೇಕಾಗಿರುತ್ತದೆ. ಇದಕ್ಕಾಗಿ ಪ್ರತಿ ಬಿಲ್ಲಿನಲ್ಲಿ ಶೇ. 6.50ರಂತೆ ಹಣವನ್ನು ಹಿಡಿದಿಡಲಾಗಿದೆ. ಈ ಹಣವನ್ನು ಕಟ್ಟಡವು ಗುತ್ತಿಗೆದಾರರ ನಿರ್ವಹಣೆ ಅವಧಿಯಲ್ಲಿ ಸಂಪೂರ್ಣ ಸಮರ್ಪಕವಾಗಿದ್ದಲ್ಲಿ ಮಾತ್ರ ಬಿಡುಗಡೆ ಮಾಡಲಾಗುವುದು.

ಹುಣಸೂರು ತಾಲ್ಲೂಕಿನಲ್ಲಿ ಎ ಎನ್ ಎಂ ಉಪ ಕೇಂದ್ರ ಕಟ್ಟಡಗಳ ನಿರ್ಮಾಣ.

2368(2959)

ಪಾಪಣ್ಣ.ವಿ.(ಹುಣಸೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಐ.ಪಿ.ಪಿ. ಯೋಜನೆಯಡಿ ಹಣದ ಕೊರತೆ ಇಲ್ಲದೆ ಹುಣಸೂರು ತಾಲ್ಲೂಕಿನಲ್ಲಿ 12 ಎ.ಎನ್.ಎಂ. ಕಟ್ಟಗಳು ನಿಧಾನಗತಿಯಿಂದ ಕಟ್ಟುತ್ತಿರುವುದಕ್ಕೆ ಕಾರಣಗಳೇನು?

ಆ) ಸಕಾಲದಲ್ಲಿ ಕಟ್ಟಡ ಕಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಇ) ಈ ಕಟ್ಟಡಕ್ಕೆ ಮಂಜೂರಾಗಿದ್ದ ಹಣ ಎಷ್ಟು ಬಿಡುಗಡೆಯಾಗಿರುವ ಹಣ ಎಷ್ಟು ವೆಚ್ಚ ಮಾಡಿರುವ ಹಣ ಎಷ್ಟು?

ಡಾ: ಮಾಲಕರೆಡ್ಡಿ (ಮಾನ್ಯ ಆರೋಗ್ಯ ಸಚಿವರು):

ಅ) ಭಾರತ ಜನಸಂಖ್ಯಾ ಯೋಜನೆ-9 (ಕ)ರಡಿಯಲ್ಲಿ ಜಿಲ್ಲಾ ಪಂಚಾಯತ್ ಎಂಜಿನಿಯರಿಂಗ್ ವಿಭಾಗ, ಕೆ.ಆರ್.ನಗರ ವ್ಯಾಪ್ತಿಯಲ್ಲಿ ಬರುವ ಹುಣಸೂರು ತಾಲ್ಲೂಕಿಗೆ 16 ಎ.ಎನ್.ಎಂ ಉಪಕೇಂದ್ರಗಳು, 1 ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು 1 ವೈದ್ಯಾಧಿಕಾರಿಗಳ ವಸತಿ ಗೃಹ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. ಈ ಪೈಕಿ 4 ಎ.ಎನ್.ಎಂ. ಉಪಕೇಂದ್ರಗಳು, 1 ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು 1 ವೈದ್ಯಾಧಿಕಾರಿಗಳ ವಸತಿ ಗೃಹ ಕಟ್ಟಡಗಳಿಗೆ ಮಂಜೂರಾತಿಯನ್ನು 96-97ನೇ ಇಸವಿಯಲ್ಲಿ ನೀಡಲಾಗಿದೆ. ಇದರಲ್ಲಿ 2 ಎ.ಎನ್.ಎಂ. ಉಪಕೇಂದ್ರ ಕಟ್ಟಡಗಳನ್ನು ಪೂರ್ಣಗೊಳಿಸಿ ಸಂಬಂಧಿಸಿದ ಇಲಾಖೆಗೆ ಹಸ್ತಾಂತರಿಸಲಾಗಿದೆ. ಉಳಿದ ಕಟ್ಟಡಗಳು ಹಸ್ತಾಂತರಿಸುವ ಹಂತದಲ್ಲಿವೆ.

ಉಳಿಕೆ ಅಂದರೆ 12 ಉಪಕೇಂದ್ರ ಕಟ್ಟಡಗಳಿಗೆ ಮಂಜೂರಾತಿಯನ್ನು ಮೇ 1999ರಲ್ಲಿ ನೀಡಲಾಗಿದೆ. ಟೆಂಡರ್‌ಗಳಿಗೆ ಅನುಮೋದನೆಯನ್ನು ಅಕ್ಟೋಬರ್/ ನವೆಂಬರ್ 1999ರಲ್ಲಿ ನೀಡಲಾಗಿದೆ. ಈ 12 ಕಟ್ಟಡಗಳ ಪೈಕಿ 9 ಉಪಕೇಂದ್ರ ಕಟ್ಟಡಗಳ ನಿರ್ಮಾಣವು ನಾನಾ ಹಂತಗಳಲ್ಲಿ ಇರುತ್ತವೆ. ಉಳಿದ ಮೂರು ಕಟ್ಟಡಗಳಿಗೆ ಸಂಬಂಧಿಸಿದ ಗುತ್ತಿಗೆದಾರರಿಂದ ಪರ್‌ಫಾಮೆನ್ಸ್ ಸೆಕ್ಯೂರಿಟಿ ಸಂದಾಯ ಮಾಡಬೇಕಾಗಿರುತ್ತದೆ.

ಆ) ಸಕಾಲದಲ್ಲಿ ಮೇಲಿನ ಕಟ್ಟಡಗಳನ್ನು ಕಟ್ಟಲು ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚನೆಯನ್ನು ನೀಡಲಾಗಿದೆ.

ಇ) ಎಲ್ಲಾ 18 ಕಟ್ಟಡಗಳಿಗೂ ಅನುಮೋದಿಸಲಾಗಿರುವ ಟೆಂಡರುಗಳ ಮೊತ್ತವು ರೂ. 92. 30 ಲಕ್ಷ ಆಗಿರುತ್ತದೆ. ಈ ಪೈಕಿ 12 ಕಟ್ಟಡಗಳಿಗೆ ರೂ. 57. 92 ಲಕ್ಷಗಳಾಗಿರುತ್ತದೆ. ಹಾಗೂ ರೂ. 5. 93 ಲಕ್ಷ ಹಣವನ್ನು ವೆಚ್ಚ ಮಾಡಲಾಗಿದೆ.

ಇಲ್ಲಿಯವರೆಗೆ ಜಿಲ್ಲಾ ಪಂಚಾಯತ್ ಎಂಜಿನಿಯರಿಂಗ್ ವಿಭಾಗ, ಕೆ. ಆರ್. ನಗರ ವಿಭಾಗಕ್ಕೆ ಮೇಲಿನ 18 ಕಾಮಗಾರಿಗಳು ಸೇರಿದಂತೆ ಒಟ್ಟು ರೂ. 149. 57 ಲಕ್ಷಗಳು ಬಿಡುಗಡೆ ಮಾಡಲಾಗಿರುತ್ತದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಂದರ್ಶಕರ ಸಮಿತಿ ರಚನೆ.

2370(2925)

ಶ್ರೀ ರಾಜುಗೌಡ ಜಿ.(ಹನ್ನೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಜ್ಯ ಮಟ್ಟದ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಂದರ್ಶಕರ ಸಮಿತಿಯನ್ನು ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ.

ಆ) ಆಸ್ಪತ್ರೆಗಳಿಗೆ ನೀಡುತ್ತಿರುವ ಅನುದಾನದ ಬಗ್ಗೆ ಔಷಧಿ ಸರಬರಾಜಿನ ಬಗ್ಗೆ ಇನ್ನಿತರ ವಿಷಯಗಳ ಬಗ್ಗೆ ಸಂದರ್ಶನ ಸಮಿತಿಯವರ ಗಮನಕ್ಕೆ ತರುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆ.

ಡಾ: ಎ. ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಸಂದರ್ಶಕರ ಸಮಿತಿಯನ್ನು ರಚಿಸುವ ಉದ್ದೇಶ ಸರ್ಕಾರಕ್ಕಿದೆ.